# ಭಾಷೆ ಮತ್ತು ಪೂರ್ವ ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮ
# ತರಬೇತಿಗಾರರಿಗೆ ತರಬೇತಿ

**ದಿನಾಂಕ:** 1 ರಿಂದ 8ನೇ ಫೆಬ್ರವರಿ 2021 ವರೆಗೆ ಮತ್ತು 12 ರಿಂದ 18ನೇ ಫೆಬ್ರವರಿ 2021 ರವರೆಗೆ

ಸ್ಥಳ: ಆರ್ ಐ ಇ, ಬೆಂಗಳೂರು ವಿಶ್ವವಿದ್ಯಾನಿಲಯ.

# ಭಾಷಾ ಬೆಳವಣಿಗೆ – ಮಿತಿಗಳು

- ವರ್ಷದಿಂದ ವರ್ಷಕ್ಕೆ ಮಕ್ಕಳಲ್ಲಿ ನಿಗದಿತ ಕಲಿಕೆ ಆಗಿಲ್ಲದಿರುವುದು ಮತ್ತು ತರಗತಿಗಳಲ್ಲಿ ಅವರನ್ನು ಸಿದ್ಧಗೊಳಿಸುವಲ್ಲಿ ಸೋತಿರುವುದು ಕಂಡು ಬರುತ್ತಿದೆ. ಮಕ್ಕಳ ಕಲಿಕಾ ಮಟ್ಟ ಪ್ರಾಥಮಿಕ ತರಗತಿಗಳಲ್ಲಿ ಅತ್ಯಂತ ಕಡಿಮೆ ಇರುವುದು ನಿಜಕ್ಕೂ ಆತಂಕದ ವಿಚಾರವಾಗಿದೆ.
- ಶಾಲೆಗೆ ಸೇರುವ ಮುನ್ನ 5 ವರ್ಷದ ಮಗುವಿನಲ್ಲಿ ಇರಬೇಕಾದ ಬೌದ್ಧಿಕ, ಆರಂಭಿಕ ಗಣಿತ ಮತ್ತು ಆರಂಭಿಕ ಭಾಷೆಯ ಕಲಿಕೆ ಸಾಮಾನ್ಯವಾಗಿ ನಿರೀಕ್ಷಿತ ಮಟ್ಟದಲ್ಲಿ ಇಲ್ಲವಾಗಿದೆ. ಈ ವಯೋಮಿತಿಯ ಮಕ್ಕಳು ತಮಗೆ ನೀಡಿದ ಸರಳ ಅಥವಾ ಲಘು ಚಟುವಟಿಕೆಗಳಾದ **‘ಒಂದು ವಸ್ತುವನ್ನು’** ತಮ್ಮದೇ ಆದ ಪದ ಅಥವಾ ವಾಕ್ಯಗಳಲ್ಲಿ ವಿವರಿಸಲು ಶಕ್ತರಾಗಿಲ್ಲ.
- ಭಾಷಾ ಕಲಿಕೆಗೆ ಬೇಕಾದ ಪೂರ್ವ ಸಿದ್ಧತೆ ಇಲ್ಲದಿರುವುದು, ಭಾಷಾ ಕಲಿಕೆ ಮೇಲೆ ಪರಿಣಾಮ ಬೀರುತ್ತಿದ್ದು, ಇತರ ಆಯಾಮಗಳ ಕಲಿಕೆಗೂ ಇದು ನಕಾರಾತ್ಮಕ ಪ್ರಭಾವ ಬೀರುತ್ತಿದೆ.
- ಆರಂಭಿಕ ವರ್ಷದ ತರಗತಿಯಲ್ಲಿ ಮುಕ್ತ ವಾತಾವರಣ ಮತ್ತು ಸೂಕ್ತ ಶಿಕ್ಷಕರ ಕೊರತೆ ಕಂಡುಬಂದಿದ್ದು, ಇದು ಮಕ್ಕಳ ಮುಂದಿನ ಭಾಷಾ ಕಲಿಕೆಗೆ ವ್ಯತಿರಿಕ್ತ ಪ್ರಭಾವ ಬೀರುತ್ತಿದೆ.


# ಭಾಷಾ ಬೆಳವಣಿಗೆಯು ಈ ಅಂಶಗಳನ್ನು ಒಳಗೊಂಡಿದೆ



- ಆಲಿಸುವುದು
- ಮಾತನಾಡುವುದು
- ಪದ ಸಂಪತ್ತು ಹೆಚ್ಚಿಸುವುದು

# ಮೌಖಿಕ ಭಾಷೆ ಏಕೆ ಮುಖ್ಯ?

- ಭಾಷಾ ಬೆಳವಣಿಗೆಯು ಮಕ್ಕಳ ಮೌಖಿಕ ಭಾಷಾ ಬೆಳವಣಿಗೆಯನ್ನು ಎಷ್ಟರ ಮಟ್ಟಿಗೆ ಅವಲಂಬಿಸಿದೆ ಎಂದರೆ, ಮೌಖಿಕ ಭಾಷೆಯ ಬೆಳವಣಿಗೆ ಇಲ್ಲದೆ ನಾವು ಓದು, ಬರಹದ ಬಗ್ಗೆ ಚರ್ಚಿಸಲೂ ಸಾಧ್ಯವಿಲ್ಲ.



# ಭಾಷೆಯ ಬೆಳವಣಿಗೆಯ ಹಂತಗಳು

1. ಅಳುವುದು (Crying)
2. ಕೂಯಿಂಗ್ (Cooing)
3. ತೊದಲು ನುಡಿಗಳು (Babbling)
4. ಸನ್ನೆಗಳು (Gestures)
5. ಮಾತು (Speech)
   - ಶಬ್ದಗಳನ್ನು ಕಲಿಯುವುದು
   - ಪದಗಳನ್ನು ಕಲಿಯುವುದು
   - ವಾಕ್ಯಗಳನ್ನು ಕಲಿಯುವುದು

# ಭಾಷಾ ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು

- ಬೌದ್ಧಿಕ ಸಾಮರ್ಥ್ಯಗಳು
- ಸಾಮಾಜಿಕ ಕೌಶಲ್ಯಗಳು
- ಮಕ್ಕಳ ಪರಿಸರ
- ಅನುವಂಶಿಯ ಸಾಮರ್ಥ್ಯ

# ಭಾಷಾ ಬೆಳವಣಿಗೆಗೆ ತರಗತಿಯಲ್ಲಿ ಅವಕಾಶಗಳು

- **ಆಲಿಸುವ ಕೌಶಲ್ಯಗಳು**
- **ಶಬ್ದಕೋಶ ಅಭಿವೃದ್ಧಿ**
- **ಸಂವಹನ**
- **ಗ್ರಹಿಕೆ(comprehension)**
- ಓದುವುದಕ್ಕೆ ಸಿದ್ಧತೆ/ತಯಾರಿ
- ಬರೆಯುಲು ಸಿದ್ಧತೆ/ತಯಾರಿ

# ಶಬ್ದಕೋಶ ಅಭಿವೃದ್ಧಿಗೆ ಕೆಲವು ಚಟುವಟಿಕೆಗಳು

**ಭಾಷಾ ಚಟುವಟಿಕೆಗಳು ಈ ಕೆಳಗಿನ ಅಂಶಗಳನ್ನು ಉತ್ತೇಜಿಸಬೇಕು:**

- ಪದ ಮತ್ತು ಚಿತ್ರಗಳು/ವಸ್ತುಗಳ ಸಂಯೋಜನೆಗೆ
- ಹೊಸ ಪದಗಳನ್ನು ಕಲಿತು ನೆನಪಿಸಿಕೊಳ್ಳಲು
- ಮಾನದಂಡದ ಆಧಾರ ಮೇಲೆ ವರ್ಗೀಕರಿಸಲು ಮತ್ತು ಹೆಸರಿಸಲು
- ಸೂಕ್ತ ಶಬ್ದಗಳನ್ನು ಸಂದರ್ಭೋಚಿತವಾಗಿ ಬಳಸಲು

# ಗ್ರಹಿಕೆಗೆ ಸಂಬಂಧಿಸಿದ ಚಟುವಟಿಕೆಗಳ ರಚನೆ

- ಮಕ್ಕಳು, ನಾವು ನೀಡಿದ ಯಾವುದೇ ಮಾಹಿತಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವಂತೆ ಚಟುವಟಿಕೆಗಳನ್ನು ರಚಿಸಬೇಕು.

**ಉದಾಹರಣೆಗೆ:**

❖ Use of prepositions- ಮೇಲೆ–ಕೆಳಗೆ, ಹಿಂದೆ–ಮುಂದೆ

- ❖ ವಸ್ತುಗಳ ಉಪಯೋಗಗಳನ್ನು ಹೆಸರಿಸುವುದು
- ❖ ಕಾರಣ ಮತ್ತು ಪರಿಣಾಮದ ಕುರಿತು ಮಾತನಾಡುವುದು
- ❖ ಒಗಟುಗಳನನ್ನು ಬಿಡಿಸುವುದು
- ❖ ಸೂಚನೆಗಳನ್ನು ಅನುಸರಿಸುವುದು
- ❖ ನಿರ್ದೇಶನಗಳನ್ನು ಅನುಸರಿಸುವುದು

# ಮೌಖಿಕ ಭಾಷೆಯ ಪಠ್ಯಕ್ರಮ

- ಮೌಖಿಕ ಭಾಷೆಯು ಗ್ರಹಿಸುವ ಮತ್ತು ಅಭಿವ್ಯಕ್ತಿಗೊಳಿಸುವ ಭಾಷೆಯನ್ನು ಒಳಗೊಂಡಿರುತ್ತದೆ– ಶಬ್ದಕೋಶ ಮತ್ತು ನಿರೂಪಣೆಯನ್ನು ಅರ್ಥೈಸಿಕೊಳ್ಳುವುದು
- ಮೌಖಿಕ ಭಾಷೆಯ ಪಠ್ಯಕ್ರಮವು ಪರಿಕಲ್ಪನೆ ಅರಿವು, ಶಬ್ದಕೋಶ ಮತ್ತು ಪ್ರಮುಖ ಜೀವನ ಕೌಶಲ್ಯವನ್ನು ಒಳಗೊಂಡಿದೆ.
- ಈ ಪಠ್ಯಕ್ರಮವು ಮಕ್ಕಳ ಪರಿಸರದ ವಿಷಯಗಳನ್ನು ಆಧರಿಸಿ ರಚಿಸಲ್ಪಟ್ಟಿದೆ.
- ಇದನ್ನು 4 ಆಯಾಮಗಳ ಮೂಲಕ ಪ್ರಸ್ತುತ ಪಡಿಸಲಾಗಿದೆ –ಸಂರಚಿತ ಸಂಭಾಷಣೆ, ಕಥೆಗಳು, ಯೋಜನಾ ಕಾರ್ಯ, ಶಿಶು ಗೀತೆಗಳು.
- ಪಠ್ಯಕ್ರಮದ ಚಟುವಟಿಕೆಗಳು ತರಗತಿಯ ಎಲ್ಲಾ ಮಕ್ಕಳನ್ನು ಕೇಂದ್ರೀಕರಿಸಿ ರಚನೆಯಾಗಿದ್ದು, ವಯಸ್ಸಿಗೆ ಅನುಗುಣವಾಗಿ ಮುಂದುವರೆಸಲು ನಿರ್ದೇಶಿಸಲಾಗಿದೆ.

# ನಮ್ಮ ಮೌಖಿಕ ಪಠ್ಯಕ್ರಮವು..

- ಥೀಮ್ (Theme) ಮತ್ತು ವಿಷಯದೊಂದಿಗೆ ಪ್ರಾರಂಭವಾಗುತ್ತದೆ
- ಒಂದು ವಿಷಯವು ಒಂದು ತಿಂಗಳು ಇರುತ್ತದೆ
- ಪ್ರತಿಯೊಂದು ವಿಷಯವು 3 ಉಪ ವಿಷಯವು ಹೊಂದಿದ್ದು, ಅದನ್ನು 4 ವಾರಗಳಲ್ಲಿ ವಿಂಗಡಿಸಲಾಗಿದೆ.
- ಪ್ರತಿಯೊಂದು ಉಪ ವಿಷಯವು ಪರಿಕಲ್ಪನೆ, ಶಬ್ದಕೋಶ ಮತ್ತು ಜೀವನ ಕೌಶಲ್ಯಗಳ ಕಲಿಕಾ ಫಲಿತಾಂಶಗಳನ್ನು ಹೊಂದಿದೆ.
- ಸಂಭಾಷಣೆಗಳು ಆಟಗಳನ್ನು ಸಹ ಒಳಗೊಂಡಿರುತ್ತವೆ
- ಸಂಭಾಷಣೆಗಳು ವಿಷಯಗಳ ಪರಿಕಲ್ಪನೆ ಮೇಲೆ ಕೇಂದ್ರಿಕೃತವಾಗಿವೆ
- ಯೋಜನಾ ಕಾರ್ಯಗಳು ಜೀವನ ಕೌಶಲ್ಯ ಮತ್ತು ಆಳವಾದ ತಿಳುವಳಿಕೆಯನ್ನು ಮೂಡಿಸುತ್ತವೆ
- ಕಥೆಗಳು ಭಾಷಾ ಕೌಶಲ್ಯ ಅಥವಾ ಜೀವನ ಕೌಶಲ್ಯವನ್ನು ಬಲಪಡಿಸಲು ಮತ್ತು ವಿಸ್ತರಿಸಲು ಸಹಾಯಕವಾಗುತ್ತವೆ
- ಅಭಿನಯ ಗೀತೆಗಳು ಮೋಜಿನ ಚಟುವಟಿಕೆಗಳಾಗಿದ್ದು, ಇವು ಪರಿಕಲ್ಪನೆಯನ್ನು ಬಲಪಡಿಸುತ್ತದೆ ಮತ್ತು ಮೌಖಿಕ ಭಾಷಾ ಬೆಳವಣಿಗೆಯ ಕೌಶಲ್ಯಗಳಾದ ಮಾತು ಮತ್ತು ಉಚ್ಚಾರಣೆಯಲ್ಲಿ ಸ್ಪಷ್ಟತೆಗೆ ಸಹಾಯವಾಗುತ್ತವೆ

# ಮೌಖಿಕ ಭಾಷಾಭಿವೃದ್ಧಿಯ ಉಪವಿಷಯಗಳು

* ನಾನು ಮತ್ತು ನನ್ನವರು
* ನಾನು ಮತ್ತು ನನ್ನ ನೆರೆಹೊರೆ (ಸಮುದಾಯ)
* ಹಬ್ಬ, ಜಾತ್ರೆ ಮತ್ತು ಆಚರಣೆಗಳು
* ವಾಹನಗಳು/ಸಾರಿಗೆ
* ಸಸ್ಯ ಪ್ರಪಂಚ
* ಪ್ರಾಣಿ ಪ್ರಪಂಚ
* ಸಮಯ, ಋತುಗಳು ಮತ್ತು ತಾಪಮಾನ
* ನೀರು, ಗಾಳಿ ಮತ್ತು ವಾತಾವರಣ
* ಸಂಪರ್ಕ ಸಾಧನಗಳು

# Learning and Behavioural Outcomes

| Topic | Conceptual clarity | Oral language | Life skills |
|---|---|---|---|
| I, Myself & My family | 1. General information about self and family: Full name & name of parents and other relations<br>2. Body parts and their functions<br>3. Home and belongings: spaces at home (kitchen, hall, toilet) and appliances including kitchen and entertainment | 1. Set of vocabulary around family members including terms for elder and youngers<br>2. Set of vocabulary around body parts including names and action words<br>3. Set of vocabulary around home and belongings<br>4. Set of vocabulary around emotions likes and dislikes | 1. Learning to address elders with respect, relationship and etiquettes<br>2. Keeping oneself clean and hygienic habits<br>3. Protection of body including good touch and bad touch, whom to trust, how to protect oneself<br>4. Being aware of emotions and express emotions in socially acceptable ways |

# ವ್ಯಕ್ತಿ ಅಧ್ಯಯನ

'ವಿವಿಧ ರೀತಿಯ ಎಲೆಗಳು, ವಿವಿಧ ರೀತಿಯ ಸಸ್ಯಗಳಿಂದ ಮಾಡಲ್ಪಟ್ಟಿದೆ' ಎಂಬ ಅಂಶವನ್ನು ಮಕ್ಕಳಿಗೆ ಮನಗಾಣಿಸಲು ಇಬ್ಬರು ಶಿಕ್ಷಕರನ್ನು ವಿಭಿನ್ನ ರೂಪದಲ್ಲಿ ಪ್ರಯತ್ನಪಟ್ಟಿದ್ದಾರೆ.

- **ಶಿಕ್ಷಕರು–'ಎ'** – ವಿವಿಧ ರೀತಿಯ ಎಲೆಗಳನ್ನು ತರಗತಿಯಲ್ಲಿ ಪ್ರದರ್ಶಿಸಿ "ಏನು ಭಿನ್ನತೆಯನ್ನು ಗುರುತಿಸಿದಿರಿ" ಎಂದು ಪ್ರಶ್ನಿಸುತ್ತಾರೆ. ಕೆಲವರ ಅಭಿಪ್ರಾಯಗಳು ತರಗತಿಯಲ್ಲಿ ಮೂಡುತ್ತದೆ. ಪ್ರತಿ ಎಲೆಗಳು ಇತರ ಎಲೆಗಳಿಂದ ವಿಭಿನ್ನವಾಗಿರುವುದನ್ನು ವಿವರಿಸಿ, ಚಿತ್ರದಲ್ಲಿರುವ ಎಲೆಗಳೊಂದಿಗೆ ನೈಜ ಎಲೆಗಳನ್ನು ಹೋಲಿಕೆ ಮಾಡಲು ಅವಕಾಶ ಕಲ್ಪಿಸುತ್ತಾರೆ. ಈ ಹೋಲಿಕೆ ನಂತರ ಮಕ್ಕಳಿಗೆ ಶಿಕ್ಷಕರು ವಿವಿಧ ರೀತಿಯ ಎಲೆಗಳು, ವಿವಿಧ ರೀತಿಯ ಸಸ್ಯಗಳಿಂದ ಬಂದುದಾಗಿದೆ ಎಂದು ವಿವರಿಸುತ್ತಾರೆ.
- **ಶಿಕ್ಷಕರು–'ಬಿ'** ಮಕ್ಕಳನ್ನು ನೇರವಾಗಿ ಟಕ್ಕೆ ಕರೆದೊಯ್ಯುತ್ತಾರೆ. ಎಲ್ಲ ಮಕ್ಕಳಿಗೆ ಎಲೆಗಳನ್ನು ಮುಟ್ಟಲು, ವೀಕ್ಷಿಸಲು, ಅವಕಾಶ ಕಲ್ಪಿಸುತ್ತಾರೆ. ಅವರ ಅನುಭವಗಳನ್ನು ಹಂಚಿಕೊಳ್ಳಲು ವಿವರಿಸಲು ಸಮಯ ನೀಡುತ್ತಾರೆ. ಮತ್ತು ಬಣ್ಣ ಆಕಾರ, ವಿಧಗಳ ಆಧಾರಿತವಾಗಿ ಹೋಲಿಸಿ ವ್ಯತ್ಯಾಸ ತಿಳಿದುಕೊಳ್ಳಲು ಸಮಯ ನೀಡುತ್ತಾರೆ. ನೇರವಾಗಿ ಮಕ್ಕಳಿಗೆ ಈ ಎಲೆಯು ಇನ್ನೊಂದು ಎಲೆಗಿಂತ ಹೇಗೆ ಭಿನ್ನವಾಗಿದೆ? ಎಂದು ಪ್ರಶ್ನಿಸಿ ಉತ್ತರ ಪಡೆಯುತ್ತಾರೆ. ಮಕ್ಕಳು ತಮ್ಮದೇ ಭಾಷೆಯಲ್ಲಿ , ಕಲ್ಪನೆಯಲ್ಲಿ ವಿವರಿಸಲು ಹೆಚ್ಚು ಅವಕಾಶ ಕಲ್ಪಿಸುತ್ತಾರೆ. ನಂತರ ಚಿತ್ರದಲ್ಲಿ ಇರುವ ಎಲೆಯೊಂದಿಗೆ ಮಕ್ಕಳ ಹತ್ತಿರ ಇರುವ ಎಲೆಗಳನ್ನು ಹೋಲಿಸಿ ಹೇಗೆ ವಿಭಿನ್ನ ರೀತಿಯ ಎಲೆಗಳು ಇವೆ, ಸಸ್ಯಗಳು ಇವೆ ಮತ್ತು ಎಲ್ಲ ಎಲೆಗಳು ಒಂದೇ ತೆರನಾಗಿಲ್ಲೆಂದು ಪೂರ್ಣವಾಗಿ ವಿವರಿಸುತ್ತಾರೆ.

# ಸಂಭಾಷಣೆ

ಮಕ್ಕಳು ವಿಷಯಕ್ಕೆ ಸಂಬಂಧಿಸಿದಂತೆ ಅವರ ಸ್ವಂತ ಅನುಭವಗಳ ಬಗ್ಗೆ ಮಾತನಾಡುವಾಗ, ಇದು ಮಕ್ಕಳ್ಳಲ್ಲಿ ಶಬ್ದಕೋಶ ಮತ್ತು ಅಭಿವ್ಯಕ್ತಿ ಸಾಮರ್ಥ್ಯವನ್ನು ಅಭಿವೃದ್ಧಿಗೊಳಸುತ್ತದೆ

**ಸಂಭಾಷಣೆಯನ್ನು ಮಾಡುವುದು ಹೇಗೆ?**

- ನಿರೀಕ್ಷಿತ ಕಲಿಕಾ ಫಲಿತಾಂಶಗಳನು ಓದಿಕೊಳುವುದು.
- ಕಲಿಕೋಪಕರಣಗಳನ್ನು ಸಿದ್ಧಪಡಿಸಿಟ್ಟುಕೊಂಡಿರುವುದು.
- ಪಠ್ಯಕ್ರಮದಲ್ಲಿರುವ ‘ಶಿಕ್ಷಕರಸಿದ್ಧತೆ’ ಯನ್ನು ಪೂರ್ವಭಾವಿಯಾಗಿ ಓದಿಕೊಂಡಿರಬೇಕು.
- ಪಠ್ಯಕ್ರಮ ಸೂಚನೆಯಲ್ಲಿ ನೀಡಿರುವ ಹಂತಗಳನ್ನು ಓದಿಕೊಂಡಿರಬೇಕು.

# ಕಥೆ

- ಮಕ್ಕಳು ಕಥೆಗಳನ್ನು ಕೇಳಲು ಇಷ್ಟಪಡುತ್ತಾರೆ
- ಕಥೆಗಳು ಇತರರ ಭಾವನೆಗಳನ್ನು ಅರ್ಥಮಾಡಿಕೊಂಡು ಸ್ಪಂದಿಸಲು ಸಹಕಾರಿಯಾಗಿದೆ
- ಇದು ಮಕ್ಕಳ ಜೀವನ ಅನುಭವಗಳು, ಭಾಷೆ ಮತ್ತು ಸಾಮಾಜಿಕ–ಸಾಂಸ್ಕೃತಿಕ ವಾತಾವರಣವನ್ನು ತರಗತಿಗೆ ತರುತ್ತದೆ. ಮಕ್ಕಳು ಕಥೆಗಳನ್ನು ತಮ್ಮ ಜೀವನಕ್ಕೆ ಹೋಲಿಸಿಕೊಳ್ಳುತ್ತಾರೆ
- ಆಸಕ್ತಿ ಮತ್ತು ಏಕಾಗ್ರತೆಯನ್ನು ಹೆಚ್ಚಿಸುತ್ತದೆ
- ಶಬ್ದಕೋಶವನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ
- ಅನುಕ್ರಮ ಚಿಂತನೆ, ಸೃಜನಶೀಲತೆ ಮತ್ತು ಸಮಸ್ಯೆ ಪರಿಹಾರ ಕೌಶಲ್ಯಗಳನ್ನು ಬೆಳೆಸುತ್ತದೆ
- ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ

# ನಮ್ಮ ಪಠ್ಯಕ್ರಮದಲ್ಲಿರುವ ಕಥೆಗಳ ವೈಶಿಷ್ಟ್ಯಗಳು.. ..

- ಸಂದರ್ಭೋಚಿತವಾದ ಮಕ್ಕಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಅನುಭವಗಳಿಗೆ ಅನುಗುಣವಾಗಿವೆ
- ವಿಷಯ/Theme ಆಧಾರಿತವಾಗಿವೆ.
- ವಯಸ್ಸಿಗೆ ಅನುಗುಣವಾದ ಸನ್ನಿವೇಶ ಮತ್ತು ಭಾಷೆಯಲ್ಲಿ ರಚಿತವಾಗಿವೆ.
- ಸರಳ ಮತ್ತು ಪುನರಾವರ್ತಿತ ಪದಗಳಿಂದ ರಚಿಸಲ್ಪಟ್ಟಿವೆ.
- ಕಥೆಗಳು ನೈತಿಕ ಅಂಶ ಆಧಾರಿತ ಅಂತ್ಯ ಹೊಂದಿರದೆ, ಮಕ್ಕಳಲ್ಲಿ ಕುತೂಹಲ/ಆಶ್ಚರ್ಯ ಹುಟ್ಟಿಸುವ ರೀತಿಯಲ್ಲಿ ಅಂತ್ಯವಾಗುತ್ತವೆ.

# ಕಥೆ ಹೇಳುವ ಹಂತಗಳು

**ಹಂತ –1:**

ಕಥೆಯನ್ನು ಮೌಖಿಕವಾಗಿ ಯಾವುದೇ ಕಲಿಕಾ ಸಾಧನಗಳಿಲ್ಲದೆ ಸೂಕ್ತ ಹಾವಭಾವ ಮತ್ತು ಧ್ವನಿ ಏರಿಳಿತದೊಂದಿಗಗೆ ನಿರೂಪಿಸುವುದು.

**ಹಂತ –2:**

ಅದೇ ಕಥೆಯನ್ನು ಕೊಟ್ಟಿರುವ ಕಾರ್ಡ್ ಅಥವಾ ಕಥೆ ಪುಸ್ತಕವನ್ನು ಉಪಯೋಗಿಸಿ ಓದುವುದು.

**ಹಂತ –3:**

ಪುನಃ ಅದೇ ಕಥೆಯನ್ನು ಸೂಕ್ತ ಕಲಿಕಾ ಸಾಮಗ್ರಿಗಳನ್ನು ಉಪಯೋಗಿಸಿ ಮಧ್ಯದಲ್ಲಿ ಪ್ರಮುಖ ಪಾತ್ರಗಳ ಹಾಗು ಸನ್ನಿವೇಶಗಳ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಾ ನಿರೂಪಿಸುವುದು.

**ಹಂತ – 4:**

**ಈ ಕೆಳಗಿನ ಪ್ರಮುಖ ಪ್ರಶ್ನೆಗಳನ್ನು ಕೇಳುವುದು..**

- ಕಥೆಯ ಪ್ರಮುಖ ಪಾತ್ರ ಮತ್ತು ಸನ್ನಿವೇಶಗಳನ್ನು ನೆನಪಿಸಿಕೊಳ್ಳುವ ಪ್ರಶ್ನೆಗಳು
- ಕಥೆಯಲ್ಲಿ ಬರುವ ಪಾತ್ರಗಳ ಭಾವನೆಗಳನ್ನು ಅರ್ಥಮಾಡಿಕೊಳ್ಳುವಂತಹ ಪ್ರಶ್ನೆಗಳು.
- ಮಕ್ಕಳು ತಾರ್ಕಿಕವಾಗಿ ಆಲೋಚಿಸಿ ಉತ್ತರಿಸುವಂತಹ ಪ್ರಶ್ನೆಗಳು.
- ಮಕ್ಕಳು ಕ್ರಿಯಾತ್ಮಕವಾಗಿ ಉತ್ತರಿಸಬಹುದಂತಹ ಪ್ರಶ್ನೆಗಳು.

**ಹಂತ – 5:**

ಕೊನೆಯದಾಗಿ ಮಕ್ಕಳು ಕಥೆಯನ್ನು 2 ರಿಂದ 3 ವಾಕ್ಯಗಳಲ್ಲಿ ಹೇಳಲು ಅವಕಾಶ ಕಲ್ಪಿಸುವುದು

# ಪ್ರಶ್ನೆಗಳು

1. **ಪ್ರತಿಧ್ವನಿ ಪ್ರಶ್ನೆಗಳು (Echo Questions):** ಕಥೆಯನ್ನು ನಿರೂಪಿಸುವಾಗ ಮಧ್ಯದಲ್ಲಿ ನಿಲ್ಲಿಸಿ ಕಥೆಯಲ್ಲಿ ಬರುವ ಪ್ರಮುಖ ಪಾತ್ರ ಮತ್ತು ಸನ್ನಿವೇಶಗಳ ಬಗ್ಗೆ ಪ್ರಸ್ನಿಸುವುದು. ಇದು ಕಥೆಯ ಕಡೆ ಮಕ್ಕಳನ್ನು ಕೇಂದ್ರೀಕರಿಸಲು ಸಹಾಯ ಮಾಡುತ್ತದೆ.

   ಉದಾ: : "ನಾನಿಲ್ಲದೇ ನಿಮ್ಮ ಕೆಲಸ ಏನು ಆಗುವುದಿಲ್ಲ. ನೀವು ಕೈ ಬಳಸಿನೇ ಊಟ ಮಾಡಬೇಕು"–ಕೈ ಏನು ಹೇಳಿತು?

2. **ನೆನಪಿಸಿಕೊಳ್ಳುವ ಪ್ರಶ್ನೆಗಳು (Recall Questions):** ಕಥೆ ಮುಗಿದ ನಂತರ, ಮಕ್ಕಳಿಗೆ ಕತೆಯ ಕುರಿತಾಗಿ ಪ್ರಶ್ನೆಗಳನ್ನು ಕೇಳಬೇಕು. ಇದು ಮಕ್ಕಳಿಗೆ ಕೇಳಿಸಿಕೊಂಡ ಕಥೆಯನ್ನು ನೆನಪಿಸಿಕೊಳ್ಳುವಲ್ಲಿ ಸಹಾಯ ಮಾಡುತ್ತದೆ. ಉದಾ: ಯಾಕೆ ಮೂಗು ನಾನೆ ಮುಖ್ಯ ಅಂತ ಹೇಳಿತು?

3. **ಕಥೆಯ ಪಾತ್ರದ ಭಾವನೆಗಳ ಆಧಾರಿತ ಪ್ರಶ್ನೆಗಳು (Affective Questions):**

   ಉದಾ: ಹೊಟ್ಟೆ ಹಸಿವಾದಾಗ ಏನನಿಸುತ್ತದೆ?

4. **ತಾರ್ಕಿಕವಾಗಿ ಆಲೋಚಿಸಿ ಉತ್ತರಿಸುವಂತಹ ಪ್ರಶ್ನೆಗಳು (Inferential Questions):** ಇದರಲ್ಲಿ ಮಕ್ಕಳಿಗೆ ಕಥೆಯಿಂದ ನೇರವಾಗಿ ಉತ್ತರ ಸಿಗುವುದಿಲ್ಲ. ಮಕ್ಕಳು ಸನ್ನಿವೇಶವನ್ನು ವಿಶ್ಲೇಷಿಸಿ ಉತ್ತರಿಸುತ್ತಾರೆ. ಉದಾ: ಒಂದು ವೇಳೆ ದೇಹದ ಎಲ್ಲಾ ಅಂಗಾಂಗಗಳು ಕೆಲಸ ಮಾಡುತ್ತಿದ್ದು ಕಾಲು ಕೆಲಸ ಮಾಡುತ್ತಿಲ್ಲವೆಂದರೆ ಏನಾಗುತ್ತಿತ್ತು? ಬೇರೆ ದೇಹದ ಅಂಗಾಂಗಗಳು ಕಾಲು ಮಾಡುವ ಕೆಲಸ ಮಾಡಬಲ್ಲವೇ?

5. **ಕ್ರಿಯಾತ್ಮಕವಾಗಿ ಉತ್ತರಿಸಬೇಕಾದ ಪ್ರಶ್ನೆಗಳು (Creative Questions):** "ಒಂದು ವೇಳೆ" ರೀತಿಯಾದ ಮುಕ್ತ ಪ್ರಶ್ನೆಗಳು. ಮಕ್ಕಳಿಗೆ ಇಲ್ಲಿ ಒಂದೇ ಪ್ರಶ್ನೆಗೆ ಬೇರೆ ಬೇರೆ ಉತ್ತರ ಊಹಿಸಲು ಅವಕಾಶವಿರುತ್ತದೆ. ಉದಾ: ಬಾಯಿ ಇರುವ ಜಾಗದಲ್ಲಿ ಕಿವಿ ಇದ್ದರೆ ಏನಾಗುತ್ತಿತ್ತು?

# Project (ಯೋಜನಾ ಕಾರ್ಯಗಳು )

- ಯೋಜನಾ ಕಾರ್ಯಗಳು ಮಕ್ಕಳು ಈಗಾಗಲೇ ಅರಿತಿರುವ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಮತ್ತು ಅದನ್ನು ಅನ್ವಯಮಾಡಲು ಸಹಾಯ ಮಾಡುತ್ತದೆ
- ಮಕ್ಕಳಲ್ಲಿ ಮೌಖಿಕ ಭಾಷೆಯನ್ನು ಅಭಿವೃದ್ಧಿಪಡಿಸುತ್ತದೆ.
- ಕಲಿತಿರುವ ಪರಿಕಲ್ಪನೆಗಳನ್ನು ಪ್ರದರ್ಶಿಸಲು ಅವಕಾಶ
- ತಮ್ಮ ಸುತ್ತಮುತ್ತಲ ಪ್ರಪಂಚವನ್ನು ಅರಿಯುವ ಕುತೂಹಲವನ್ನು ಪೋಷಿಸುತ್ತದೆ.
- ಇದು ಮಕ್ಕಳನ್ನು ಅನ್ವೇಷಿಸಲು, ಆಲೋಚಿಸಲು, ವಿಶ್ಲೇಷಿಸಲು, ಉತ್ತರವನ್ನು ಕಂಡುಕೊಳ್ಳಲು ಪ್ರೋತ್ಸಾಹಿಸುತ್ತದೆ, ಅವರನ್ನು ಸ್ವತಂತ್ರ ಚಿಂತಕರನ್ನಾಗಿಸುತ್ತದೆ.
- ಪ್ರಮುಖ ಜೀವನ ಕೌಶಲಗಳನ್ನು ಬಲಪಡಿಸುತ್ತದೆ.

# ಶಿಶು ಗೀತೆಗಳು

ಶಿಶು ಗೀತೆಗಳು ತರಗತಿಯನ್ನು ಆನಂದದಾಯಕವಾಗಿಸುವದಲ್ಲದೇ ಮಕ್ಕಳಲ್ಲಿ ಫೋನಿಮಿಕ್(phonemic)ಅರಿವು ಮೂಡಿಸುತ್ತದೆ. ಮಕ್ಕಳಿಗೆ ಭಾಷೆಯಲ್ಲಿನ ಶಬ್ದಗಳನ್ನು ಪರಿಚಯಿಸಿ ಅವುಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ.

**ಸೂಚನೆಗಳು:**

- ಶಿಶುಗೀತೆಯನ್ನು ಪರಿಚಯಿಸಿ ಅದು ಯಾವುದರ ಬಗ್ಗೆ ಇದೆ ಎಂದು ವಿವರಿಸುವುದು.
- ಶಿಶುಗೀತೆಯನ್ನು ಲಯಬದ್ಧವಾಗಿ ಭಾವಾಭಿನಯದೊಂದಿಗೆ ರಾಗವಾಗಿ ಮತ್ತು ಪೂರ್ತಿಯಾಗಿ ಮಕ್ಕಳು ಕೇಳಿಸಿಕೊಳ್ಳುವಂತೆ ಹಾಡುವುದು.
- ಗೀತೆಯ ಪ್ರತಿಯೊಂದು ಸಾಲನ್ನೂ ನೀವು ಹಾಡಿದ ಮೇಲೆ ಹಾಡುವಂತೆ ಮಕ್ಕಳಿಗೆ ಹೇಳುವುದು ಮತ್ತು ಚಿತ್ರವನ್ನು ತೋರಿಸಿ ಅದರ ಅರ್ಥವನ್ನು ವಿವರಿಸುವುದು.
- ಶಿಶುಗೀತೆಯನ್ನು ಅಭಿನಯಿಸಿ ತೋರಿಸಿ ಮತ್ತು ಅದನ್ನು ಮಕ್ಕಳು ಅನುಸರಿಸಲು ಹೇಳುವುದು.
- ಈಗ ನಿಮ್ಮ ಜೊತೆಗೆ ಅಭಿನಯ ಮಾಡುತ್ತಾ ಹಾಡಲು ಹೇಳುವುದು.
- ಮಕ್ಕಳು ಗುಂಪಿನಲ್ಲಿ ಅಥವಾ ಒಬ್ಬೊಬ್ಬರಾಗಿ ಹಾಡಲು ಪ್ರೋತ್ಸಾಹಿಸುವುದು.

# ವಂದನೆಗಳು